16 ಉಡುಪಿ	26 ಶ್ರೀ ಭುಜಬುಲ್ ಬ್ರಹ್ಮಚರ್ಯ ಖಾಸಗಿ ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ	ಹಿರಿಯಂಗಡಿ ಕಾರ್ಕಳ ತಾ	25
	27 ಮುಸ್ಲಿಂ ಮಾರ್ಡನ್ ಎಜುಕೇಶನ್ ಸೊಸೈಟಿ	ಮುಂಡಗೋಡು	60
17 ಉತ್ತರ ಕನ್ನಡ	28 ದಿ ನಾರ್ತ್ ಕರ್ನಾಟಕ ಜಜ್ಜಿತ ಎಜುಕೇಷನ್ ಅಂಡ್ ಚಾರಿಟಬಲ್ ಮೈನಾರಿಟಿ ಹಾಸ್ಟೆಲ್ (ಆಶಾಕಿರಣ)	ಮುಂಡಗೋಡು	110
		ಒಟ್ಟು	**1547**

650 (958) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶು ಸಂಗೋಪನೆಗಾಗಿ ಸರ್ಕಾರ ಕಳೆದ ಐದು ವರ್ಷಗಳಿಂದ ಕೈಗೊಂಡಿರುವ ಯೋಜನೆಗಳಾವುವು?

ಆ) ಇದಕ್ಕಾಗಿ ಇಲ್ಲಿಯವರೆಗೆ 2006ರ ಡಿಸೆಂಬರ್ ಅಂತ್ಯಕ್ಕೆ ಖರ್ಚು ಮಾಡಲಾಗಿರುವ ಹಣ ಎಷ್ಟು?

ಇ) ಈ ಅವಧಿಯಲ್ಲಿ ಕೈಗೊಂಡಿರುವ ಜಿಲ್ಲಾವಾರು ಯೋಜನೆಗಳು ಯಾವುವು? ಖರ್ಚಾಗಿರುವ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಕಳೆದ 5 ವರ್ಷಗಳಿಂದ ಪಶುಸಂಗೋಪನೆಗಾಗಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿದೆ

ಜಿಲ್ಲಾ ವಲಯ ಕಾರ್ಯಕ್ರಮಗಳು

1 ಪಶು ಆಸ್ಪತ್ರೆಗಳಿಗೆ ಔಷಧ ಮತ್ತು ರಾಸಾಯನಿಕಗಳ ಸರಬರಾಜು ಯೋಜನೆ

2 ದ್ರವಸಾರಜನಕ ಮತ್ತು ಕೃತಕ ಗರ್ಭಧಾರಣೆ ಸಲಕರಣೆಗಳ ಸರಬರಾಜು ಯೋಜನೆ

3 ಕಟ್ಟಡಗಳು

4 ಗಿರಿರಾಜ ಕೋಳಿ ಸಾಕಾಣೆ ಮತ್ತು ಸರಬರಾಜು

5 ಗೊಡ್ಡುರಾಸುಗಳ ಚಿಕಿತ್ಸಾ ಶಿಬಿರದ ವ್ಯವಸ್ಥೆ

6 ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ

7 ವಿಸ್ತರಣಾ ಘಟಕಗಳ ಬಲವರ್ಧನೆ

8 ಜಿಲ್ಲಾ ಮಟ್ಟದಲ್ಲಿ ಪಾಲಿ ಕ್ಲಿನಿಕ್‌ಗಳ ಸ್ಥಾಪನೆ

9 ಪಶು ಚಿಕಿತ್ಸಾಲಯಗಳನ್ನು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು

10 ಟಗರು ಮತ್ತು ಹಂದಿ ಮರಿಗಳ ಸರಬರಾಜು ಕಾರ್ಯಕ್ರಮ

11 ಮುಧೋಳ ಶ್ವಾನ ರಕ್ಷಣಾ ಕಾರ್ಯಕ್ರಮ

12 ಕುರಿ ಮಂಡಳಿ ಮುಖಾಂತರ ಕುರಿ ವಿಮೆ ಯೋಜನೆ ಮತ್ತು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ

13 ಜಾನುವಾರು ರೋಗಗಳ ನಿಯಂತ್ರಣ ಯೋಜನೆ

14 ಮೇವಿನ ಮಿನಿ ಕಿಟ್ ಸರಬರಾಜು ಯೋಜನೆ

15 ಮೇವಿನ ಪೌಷ್ಟೀಕರಣ ಯೋಜನೆ

16 ಮೊಲ ಸಾಕಾಣಿಕೆ

ರಾಜ್ಯ ವಲಯ ಕಾರ್ಯಕ್ರಮಗಳು.

1 ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪನೆ

2 ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಸ್ಥಾಪನೆ (ಹೊಸ ಕಾರ್ಯಕ್ರಮ)

3 ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಯೋಜನೆ (ಹೊಸ ಕಾರ್ಯಕ್ರಮ)

4 ಗೋಮೂತ್ರದಲ್ಲಿನ ಔಷಧಿ ಗುಣಮಟ್ಟಗಳ ಮೇಲೆ ಹೆಚ್ಚಿನ ಸಂಶೋಧನೆ (ಹೊಸ ಕಾರ್ಯಕ್ರಮ)

5 ಶಿವಮೊಗ್ಗದಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪನೆ (ಹೊಸ ಕಾರ್ಯಕ್ರಮ)

6 ಕೇಂದ್ರ ನೆರವಿನಡಿ ಗ್ರಾಮೀಣ ನಿರ್ವಹಣೆ ಮತ್ತು ಆಡಳಿತ ಸಂಸ್ಥೆ ಸ್ಥಾಪನೆ (ಹೊಸ ಕಾರ್ಯಕ್ರಮ)

7 ಕೇಂದ್ರ ಪುರಸ್ಕೃತ ದೊಡ್ಡರೋಗ ನಿವಾರಣಾ ಯೋಜನೆ ಕಣ್ಗಾವಲು ಕಾರ್ಯಕ್ರಮ (ಹೊಸ ಕಾರ್ಯಕ್ರಮ)

8 ಶುದ್ಧ ಹಾಗೂ ಗುಣಮಟ್ಟದ ಹಾಲು ಉತ್ಪಾದನೆ (ಹೊಸ ಕಾರ್ಯಕ್ರಮ)

9 ಪಶುಸಂಗೋಪನೆ ಮೇಲಿನ ಬಂಡವಾಳ ವೆಚ್ಚ (ಹೊಸ ಕಾರ್ಯಕ್ರಮ)

ಆ) ಈ ಯೋಜನೆಗಳಿಗೆ 2006–07ರಲ್ಲಿ ಜಿಲ್ಲಾ ವಲಯ ಮತ್ತು ರಾಜ್ಯವಲಯ ಕಾರ್ಯಕ್ರಮ ಅಡಿಯಲ್ಲಿ 16400 38 ಲಕ್ಷಗಳ ಅನುದಾನ ನಿಗಧಿಯಾಗಿದೆ ರೂ 6258 29 ಲಕ್ಷ ಅನುದಾನ ಬಿಡುಗಡೆಯಾಗಿದೆ ಹಾಗೂ ರೂ 4689 26 ಲಕ್ಷ ಅನುದಾನ ಖರ್ಚು ಮಾಡಲಾಗಿದೆ

ಇ) ಜಿಲ್ಲಾ ವಲಯ ಯೋಜನೆಗಳ ವಿವರವನ್ನು ಅನುಬಂಧ–1ರಲ್ಲಿ ವಿವರವಾಗಿ ಸಲ್ಲಿಸಿದ್ದು ಡಿಸೆಂಬರ್ ಅಂತ್ಯಕ್ಕೆ ನಿಗಧಿಯಾದ ರೂ 3009 32 ಲಕ್ಷ ಅನುದಾನದಲ್ಲಿ 1771 04 ಲಕ್ಷ ಬಿಡುಗಡೆಯಾಗಿದ್ದು ರೂ 1761 54 ಲಕ್ಷಗಳ ಅನುದಾನ ಬಳಕೆಯಾಗಿದೆ ಜಿಲ್ಲಾವಾರು ವಿವರ ಅನುಬಂಧ–2 ರಲ್ಲಿ ಸಲ್ಲಿಸಿದೆ

ಪ್ರಶ್ನೆ ಸಂಖ್ಯೆ 958 ಅನುಬಂಧ–1 ಶ್ರೀ ವೈದ್ಯನಾಥ ಪಾಟೀಲ್

ಅ) ಜಿಲ್ಲಾ ವಲಯ ಕಾರ್ಯಕ್ರಮಗಳು

1) ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ.

ಪಾಲಿಕ್ಲಿನಿಕ್ ಸ್ಥಾಪನೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ ರೂ 21 63 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ

2) ಕಟ್ಟಡಗಳು

ಜಿಲ್ಲಾವಲಯಕ್ಕೆ ಸೇರಿದ ವಿವಿಧ ಪಶು ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 135 80 ಲಕ್ಷಗಳು ನಿಗಧಿಪಡಿಸಿದೆ

3) ಔಷಧಿ ಮತ್ತು ರಾಸಾಯನಿಕ ಸರಬರಾಜು

2006–07ನೇ ಸಾಲಿನಲ್ಲಿ ಘನೀಕೃತ ವೀರ್ಯ ನಳಿಕೆಗಳನ್ನು ಸಂರಕ್ಷಿಸಲು ಬೇಕಾದ ದ್ರವ ಸಾರಜನಕ ಔಷಧಿ, ಲಸಿಕೆಗಳು ಹಾಗೂ ರಾಸಾಯನಿಕಗಳ ಖರೀದಿಗಾಗಿ ರೂ 512 09 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದೆ

4) ಜಾನುವಾರು ತಳಿ ಸಂವರ್ಧನಾ ಕೇಂದ್ರ

ಜಾನುವಾರು ತಳಿ ಸಂವರ್ಧನಾ ಕೇಂದ್ರ, ಬುರ್ಗಿ, ಚಾಮರಾಜನಗರ ಜಿಲ್ಲೆ ಇಲ್ಲಿಯ ಸಿಬ್ಬಂದಿಯ ವೇತನಕ್ಕಾಗಿ ಹಾಗೂ ಇತರೆ ವೆಚ್ಚಕ್ಕಾಗಿ ರೂ 6 41 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿದೆ

5) ಗಿರಿರಾಜ ಹಕ್ಕಿಗಳ ಸಾಕಾಣಿಕೆ

ಗ್ರಾಮೀಣ ಜನತೆಯ ಹಿತ್ತಲಲ್ಲಿ ಕೋಳಿ ಸಾಕಾಣಿಕೆ ಮಾಡಲು ಆರ್ಥಿಕ ಅಭಿವೃದ್ಧಿ ಹೊಂದಲು ಸಹಾಯವಾಗುವಂತೆ ಹೆಚ್ಚು ಹೆಚ್ಚು ಗಿರಿರಾಜ ಕೋಳಿ ಸಾಕಾಣಿಕೆ ಮಾಡಿ ಸರಬರಾಜು ಮಾಡಲು ಪ್ರಸಕ್ತ ಸಾಲಿನಲ್ಲಿ ರೂ 32 60 ಲಕ್ಷಗಳನ್ನು ನಿಗಧಿಪಡಿಸಿದೆ

6) ವಿಸ್ತರಣಾ ಘಟಕಗಳ ಬಲಪಡಿಸುವಿಕೆ

ಜಾನುವಾರು ಆರೋಗ್ಯ ಮತ್ತು ಜಾನುವಾರುಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಸ್ತರಣಾ ಚಟುವಟಿಕೆಗಳಿಗಾಗಿ ಪ್ರಸಕ್ತ ಸಾಲಿನಲ್ಲಿ ರೂ 27 07 ಲಕ್ಷಗಳನ್ನು ನಿಗಧಿಪಡಿಸಿದೆ

7) ಮೊಲ ಸಾಕಾಣಿಕೆ ಕ್ಷೇತ್ರಗಳು

ಕೋಲಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ರೂ 1 00 ಲಕ್ಷ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮೊಲಗಳನ್ನು ಉತ್ಪಾದಿಸಿ ರೈತರಿಗೆ ವಿತರಣೆ ಮಾಡುವ ಗುರಿಯನ್ನು ಹೊಂದಲಾಗಿದೆ

8) ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ–75 ರಾಜ್ಯ – 25)

ಈ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ 470 68 ಲಕ್ಷ ವೆಚ್ಚದಲ್ಲಿ ಜಾನುವಾರುಗಳಿಗೆ ಹಾಲು ಬಾಯಿ ಜ್ವರ, ಗಂಟಲು ಬೇನೆ ಹಾಗೂ ಪಿ ಪಿ ಆರ್ ರೋಗಗಳ ವಿರುದ್ಧ ಲಸಿಕೆ ಹಾಕುವ ಗುರಿ ಹೊಂದಲಾಗಿದೆ

ಆ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು:

9) ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಹಾಗೂ ಅವುಗಳನ್ನು ಮೇಲ್ದರ್ಜೆಗೇರಿಸುವುದು

ಹಾಲಿ ಇರುವ ಪಶು ಸಂಸ್ಥೆಗಳ ಸಿಬ್ಬಂದಿ ವೇತನ, ಹಾಗೂ ಇತರೆ ಖರ್ಚಿಗಾಗಿ ಹಾಗೂ ಹೊಸದಾಗಿ ಪ್ರಾರಂಭಿಸುವ ಪಶು ಸಂಸ್ಥೆಗಳ ಖರ್ಚಿಗಾಗಿ ಹಾಗೂ ಪಶು ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ 1745 52 ಲಕ್ಷ ಅನುದಾನ ನಿಗಧಿಪಡಿಸಲಾಗಿದೆ

10) ಗೊಡ್ಡು / ಬಂಜೆ ಜಾನುವಾರುಗಳ ಶಿಬಿರದ ವ್ಯವಸ್ಥೆ

ಪ್ರಸಕ್ತ ಸಾಲಿನಲ್ಲಿ ರೂ 51 61 ಲಕ್ಷಗಳ ಅನುದಾನದೊಂದಿಗೆ ಗೊಡ್ಡು ಜಾನುವಾರು ಶಿಬಿರಗಳನ್ನು ಏರ್ಪಡಿಸುವುದು ಹಾಗೂ ರೈತರಲ್ಲಿ ಜಾನುವಾರುಗಳಲ್ಲಿನ ಬಂಜೆತನದ ಬಗ್ಗೆ ಅರಿವು ಮೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

11) ಟಗರು ಮತ್ತು ಹಂದಿ ಸರಬರಾಜು:

ಕುರಿ ಮತ್ತು ಹಂದಿ ಅಭಿವೃದ್ಧಿಗಾಗಿ ರೂ 4 97 ಲಕ್ಷ ವೆಚ್ಚದಲ್ಲಿ ಆಯ್ದ ಐದು ಜಿಲ್ಲೆಗಳಲ್ಲಿ ಉತ್ತಮ ಗುಣಮಟ್ಟದ ಟಗರು ಮತ್ತು ಹಂದಿಗಳನ್ನು ದುರ್ಬಲ ವರ್ಗದ ಜನರಿಗೆ ಸರಬರಾಜು ಮಾಡಲು ಉದ್ದೇಶಿಲಾಗಿದೆ

ಅನುಬಂಧ-2

ಪ್ರಶ್ನೆ ಸಂಖ್ಯೆ956 ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ)
ಜಿಲ್ಲಾವಾರು ಪ್ರಗತಿ ವಿವರ

ಆರ್ಥಿಕ

ಕ್ರಮ ಸಂಖ್ಯೆ	ಜಿಲ್ಲೆ	ವಾರ್ಷಿಕ ನಿಗಧಿ	ಸಂಚಿತ ಗುರಿ	ಸಂಚಿತ ಪ್ರಗತಿ	%	ಬಿಡುಗಡೆ
1	ಬಾಗಲಕೋಟೆ	123 76	102 80	103 32	100 51	82 35
2	ಬೆಂಗಳೂರು ಗ್ರಾ	134 89	74 32	85 32	114 80	72 8
3	ಬೆಂಗಳೂರು ನಗರ	137 66	121 25	69 15	57 03	92 16

4	ಬೆಳಗಾಂ	166 23	136 28	138 44	101 58	108 75
5	ಬಳ್ಳಾರಿ	115 55	89 95	65 20	72 48	75 52
6	ಬೀದರ್	83 90	50 40	33 87	67 20	33 87
7	ಬಿಜಾಪುರ	114 71	92 72	72 40	78 08	72 40
8	ಚಾಮರಾಜನಗರ	74 22	60 00	47 26	78 77	47 26
9	ಚಿಕ್ಕಮಗಳೂರು	104 00	80 06	54 99	68 69	54 99
10	ಚಿತ್ರದುರ್ಗ	59 98	37 39	24 15	64 59	24 15
11	ದಾವಣಗೆರೆ	119 57	92 15	42 42	46 08	62 28
12	ದಕ್ಷಿಣ ಕನ್ನಡ	83 64	69 98	61 98	88 57	58 23
13	ಧಾರವಾಡ	106 94	80 79	57 52	71 20	63 54
14	ಗದಗ	49 46	42 52	40 61	95 51	32 7
15	ಗುಲ್ಬರ್ಗಾ	198 47	150 01	104 93	69 95	101 89
16	ಹಾಸನ	124 72	105 12	72 18	68 66	88 82
17	ಹಾವೇರಿ	51 28	33 31	31 94	95 89	31 90
18	ಕೊಡಗು	49 80	23 25	18 97	81 59	22 89
19	ಕೋಲಾರ	164 10	146 03	100 65	68 92	95 00
20	ಕೊಪ್ಪಳ	75 72	61 28	47 95	78 25	17 07
21	ಮಂಡ್ಯ	128 75	93 85	74 76	79 66	74 76
22	ಮೈಸೂರು	166 83	127 50	95 34	74 78	94 13
23	ರಾಯಚೂರು	150 22	111 57	67 08	60 12	70 36
24	ಶಿವಮೊಗ್ಗ	149 88	122 50	69 57	56 79	91 23
25	ತುಮಕೂರು	162 10	128 47	95 20	72 55	85 00

26	ಉಡುಪಿ	60 78	50 50	51 27	101 52	50 50
27	ಉತ್ತರ ಕನ್ನಡ	50 16	36 24	37 07	102 29	36 4
	ಒಟ್ಟು	**3009 32**	**2320 24**	**1761 54**	**75 92**	**1771 04**

651 (959) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ವಿವಿಧ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು?

ಆ) ಅವುಗಳನ್ನು ಯಾವಾಗ ರೂಪಿಸಲಾಯಿತು?

ಇ) ಅವುಗಳಲ್ಲಿ ಜಾರಿಯಾಗುತ್ತಿರುವ ಕಲ್ಯಾಣ ಯೋಜನೆಗಳು ಯಾವುವು?

ಈ) ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸದ ನೆರವಿಗಾಗಿ ಎಲ್ಲ ಹಂತದಲ್ಲಿ ವಿದ್ಯಾಭ್ಯಾಸ ಸರ್ಕಾರ ನೀಡುವ ವಿದ್ಯಾರ್ಥಿ ವೇತನ/ಸಹಾಯ ಧನದ ಮಿತಿಯನ್ನು ಯಾವಾಗ ನಿರ್ಧರಿಸಲಾಯಿತು

ಉ) ಹಾಗಿದ್ದಲ್ಲಿ, ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಕಾರ್ಮಿಕ ಮಕ್ಕಳಿಗೆ ನೀಡುತ್ತಿರುವ ಸಹಾಯ ಧನ/ವಿದ್ಯಾರ್ಥಿ ವೇತನದ ಪರಿಷ್ಕರಣೆ ಆಗಿದೆಯೇ?

ಊ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಋ) ವಿವಿಧ ಜಿಲ್ಲೆಗಳ ಕಾರ್ಮಿಕರ ಮಕ್ಕಳಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವ ವಿದ್ಯಾರ್ಥಿ ವೇತನ ಎಷ್ಟು?

ಎ) ಉನ್ನತ ವ್ಯಾಸಂಗಕ್ಕೆ ನೀಡಲಾದ ಸಹಾಯ ಧನದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರವು ನೇರವಾಗಿ ಯಾವುದೇ ಯೋಜನೆಗಳನ್ನು ರೂಪಿಸಿರುವುದಿಲ್ಲ ಆದರೆ, ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ